## <u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ</u>

**ಸಿ.ಸಿ.ನಂ.2550/2025**

ಸಿ.ಡಬ್ಲ್ಯು 13

ಪಿ.ಡಬ್ಲ್ಯು 07

ಸಾಕ್ಷಿದಾರರ ಹೆಸರು - **ಶ್ರೀಧರ ಎಸ್ ಆರ್**

ತಂದೆಯ ಹೆಸರು - ರಾಮಚಂದ್ರ ಮೂರ್ತಿ

ವಯಸ್ಸು - 44 ವರ್ಷ

ಉದ್ಯೋಗ - **ಪೊಲೀಸ್ ನಿರೀಕ್ಷಕರು, ಗೋಕರ್ಣ ಪೊಲೀಸ ಠಾಣೆ**

ವಾಸ್ತವ್ಯ - ಗೋಕರ್ಣ

(ಇಂದು ದಿನಾಂಕಃ 26-**02-2026** ರಂದು ಸತ್ಯ-ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನಾನು ದಿಃ **12/03/2025** ರಿಂದ **ಇಲ್ಲೀಯವರೆಗೆ** ಗೋಕರ್ಣ ಪೊಲೀಸ ಠಾಣೆಯಲ್ಲಿ ಪೊಲೀಸ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 29/06/2025 ರಂದು ಮಧ್ಯಾಹ್ನ 02-45 ಗಂಟೆ ಗ ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರು ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಠಾಣಾ ಗುನ್ನಾ .ಸಂಖ್ಯೆ 72/2025 ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು, ಮಾನ್ಯ ನ್ಯಾಯಾಲಯದಿಂದ ಪ್ರವವ ಪ್ರಥಮ ವರ್ತಮಾನ ವರದಿಯನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು

ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು **ದೂರನ್ನು** ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ **ನಿ.ಪಿ.1 ಎಂದು** ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 1ಬಿ ಎಂದು** ಸಾಕ್ಷಿಯು **ಪ್ರಥಮ ವರ್ತಮಾನ ವರದಿ**ಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು **ನಿ.ಪಿ.14 ಎಂದು**, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.14(ಎ) ಎಂದು** ಗುರುತಿಸಲಾಯಿತು.

ಅದೇ ದಿನ ಗೋಕರ್ಣ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟ್ಟಿ ನೀಡಿ ಶವಾಗಾರದಲ್ಲಿ ಇದ್ದ ಮೃತ ಲಲಿತಾ ಗೌಡಾ ಇವರ ಮೃತ ದೇಹವನ್ನು ಪರಿಶೀಲಿಸಿರುತ್ತೇನೆ. ಮೃತಳ ತಲೆಯ ಹಿಂಭಾಗಕ್ಕೆ ರಕ್ತ ಗಾಯವಾಗಿರುವುದು ಕಂಡು ಬಂದಿರುತ್ತದೆ. ನಿಪಿ8 ನ್ನು ಜರುಗಿಸಿರುತ್ತೇನೆ. ನಿಪಿ 8 ರ ಸಾಕ್ಷಿಯ ಸಹಿಯನ್ನು ನಿಪಿ 8ಎ ಎಂದು ಗುರುತಿಲಾಯಿತು.

ಚಾಸಾ 11 ರವರ ಸಹಾಯದಿಂದ ಶವ ಪಂಚನಾಮೆಯ ಕಾಲಕ್ಕೆ ಭಾವಚಿತ್ರವನ್ನು ತೆಗೆದಿರುತ್ತೇನೆ. ಸಾಕ್ಷಿಯು ನಿಪಿ 11 ನ್ನು ಗುರುತಿಸಿರುತ್ತಾರೆ. ಮರಣೋತ್ತರ ಪರೀಕ್ಷೆಯ ಕುರಿತು ಕೋರಿಕೆಯ ಪತ್ರವನ್ನು ಬರೆದಿರುತ್ತೇನೆ.

ಮೃತ ದೇಹದ ಬೆಂಗಾವಲಿಗೆ ಇದ್ದ ಮಹಿಳಾ ಪೊಲೀಸ ಸಿಬ್ಬಂದಿ ಸವಿತಾ ಗೌಡಾ ಇವರು ಮರಣೋತ್ತರ ಪರೀಕ್ಷೆ ಆದ ನಂತರ ಮೃತ ದೇಹವನ್ನು ವಾರಿಸುದಾರರಿಗೆ ಬಿಟ್ಟು ಕೊಟ್ಟು ಅದರ ಸ್ವೀಕೃತಿಯನ್ನು ಹಾಜರುಪಡಿಸಿರುತ್ತಾರೆ.

ಅದೇ ದಿನ ಚಾಸಾ 5 ಹಾಗೂ 6 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ.

ದಿನಾಂಕಃ 30/06/2025 ರಂದು ಅಪಘಾತ ಸ್ಥಳಕ್ಕೆ ಭೇಟ್ಟಿ ನೀಡಿರುತ್ತೇನೆ. ಅಲ್ಲಿ ಚಾಸಾ 1 ರವರು ತೋರಿಸಿದಂತೆ ಚಾಸಾ 2 ಹಾಗೂ 3 ರವರ ಸಮಕೆಮದಲ್ಲಿ ನಿಪಿ 2 ರಂತೆ ಪಂಚನಾಮೆಯನ್ನು 12-00 ರಿಂದ 12*25 ಗಂಟೆಯವರಗೆ ಮಾಡಿ ನಿಪಿ3 ರಂತೆ ಕಚ್ಚಾ

ನಕಾಶೆಯನ್ನು ತಯಾರಿಸಿ ನಿಪಿ4 ಹಾಗೂ 5 ರಂತೆ ಭಾವಚಿತ್ರವನ್ನು ತೆಗೆದಿರುತ್ತೇನೆ. ನಿಪಿ 2 ರ ಸಾಕ್ಷಿಯ ಸಹಿಯನ್ನು ನಿಪಿ2ಡಿ ಎಂದು, ನಿಪಿ3 ರ ಸಾಕ್ಷಿಯ ಸಹಿಯನ್ನು ನಿಪಿ3ಡಿ ಎಂದು ಗುರುತಿಸಲಾಯಿತು. ನಿಪಿ4 ಹಾಗೂ 5 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಅದೇ ದಿನ ನಿಪಿ9 ರಂತೆ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನವನ್ನು ಚಾಸಾ 2 ಹಾಗೂ 3 ರಟವರ ಸಮಕ್ಷಮದಲ್ಲಿ 12-35 ರಿಂದ 12-50 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ ವಾಹನವನ್ನು ಯಾಂತ್ರೀಕ ಪರೀಕ್ಷೆಗಾಗಿ ತಡೆಹಿಡಿದಿರುತ್ತೇನೆ.

ನಿಪಿ 9 ರ ಸಾಕ್ಷಿಯ ಸಹಿಯನ್ನು ನಿಪಿ9ಸಿ ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ 10 ರಲ್ಲ ತಮ್ಮ ಇರುವಿಕೆಯಿನ್ನು ನೋಡಿ ಗುರುತಿಸಿರುತ್ತಾರೆ.

ಅದೇ ದಿನ ಚಾಸಾ 1 ರವರ ಮರು ಹೇಳಿಕೆ ಹಾಗೂ ಚಾಸಾ 7 ರವರ ಹೇಳಿಕೆಯನ್ನ ತೆಗೆದುಕೊಂಡಿರುತ್ತೇನೆ.

ಅದೇ ದಿನ ಈ ಪ್ರಕರಣದ ಭಾವಚಿತ್ರಕ್ಕೆ ಸಂಬಂಧಿಸಿದಂತೆ ಚಾಸಾ 11 ರವರಿಂದ 63(4) ಭಾ.ಸಾ.ಅ. ನಿಯಮದ ಪ್ರಕಾರ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ದಾಖಲಾತಿಯನ್ನು ನಿಪಿ 15 ಎಂದು ಸಾಕ್ಷಿಯ ಸಹಿಯನ್ನು ನಿಪಿ15ಎ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಅಪಘಾತಪಡಿಸಿದ ಮೋಟಾರ ಸೈಕಲನ್ನು ಯಾಂತ್ರೀಕ ಪರೀಕ್ಷೆಗಾಗಿ ಚಾಸಾ 9 ರವರಿಗೆ ನಿವೇದಿಸಿಕೊಂಡಿರುತ್ತೇನೆ.

ಅದೇ ಆರೋಪಿತನಿಗೆ ಕಲಂ 35(3) ಬಿ ಎನ್ ಎಸ್ ಎಸ್ ಅನ್ವಯ ತನಿಖೆಗೆ ಸಹಕರಿಸುವಂತೆ ನೋಟೀಸನ್ನು ನೀಡಿರುತ್ತೇನೆ.

**C.W.** 13 **P.W.** 07

ದಿನಾಂಕಃ 03/07/2025 ರಂದು ಅಪಘಾತ ಸ್ಥಳಕ್ಕೆ ಭೇಟ್ಟಿ ನೀಡಿ ಚಾಸಾ 9 ಹಾಗೂ AEE, Kumta ರವರೊಂದಿಗೆ ಜಂಟಿ ತನಿಖಾ ವರದಿಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕಃ 08/07/2025 ರಂದು ಅಪಘಾತ ಪಡಿಸಿದ ವಾಹನದ ಮಾಲಪೀಕರಾದ 2ನೇ ಆರೋಪಿತನಿಗೆ ಕಲಂ 133 ನೋಟೀಸನ್ನು ನೀಡಿ ಲಿಖಿತವಾಗಿ ಉತ್ತರವನ್ನು ಪಡೆದುಕೊಂಡಿರುತ್ತೇನೆ. ನೋಟೀಸನ್ನು ನಿಪಿ 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ16ಎ ಎಂದು, ಉತ್ತರವನ್ನು ನಿಪಿ17 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ17ಎ ಎಂದು ಗುರುತಿಸಲಾಯಿತು.

ನಿಪಿ 17 ರಲ್ಲಿ 2ನೇ ಅರೋಪಿತನು ತನ್ನ ವಾಹನಕ್ಕೆ ಸಂಬಂಧಿಸಿದಂತೆ ಗುನ್ಹಾ ಪಾಲಿಸಿ ಇರುವುದಿಲ್ಲ ಎಂದು ಹಾಗೂ 1ನೇ ಆರೋಪಿತನಿಗೆ ಚಾಲನಾ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಸದ್ರಿ ವಾಹನಕ್ಕೆ ವಿಮೆ ಇಲ್ಲದ ಕಾರಣ ಅದನ್ನು ಪಿ ಎಫ್ ಸಂಖ್ಯೆ 49/25 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕಃ 12/07/2025 ರಂದು ಚಾಸಾ 8 ರವರಿಂದ ಮೃತರ ಪಿ ಎಮ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಪಿ18 ಎಂದು, ಸಾಕ್ಷಿಯ ಸಹಿಯನ್ನು ನಿಪಿ18ಎ ಎಂದು ಗುರುತಿಸಲಾಯಿತು.

ದಿನಾಂಕಃ 24/07/2025 ರಂದು ಚಾಸಾ 12 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

**C.W.** 13 **P.W.** 07

ದಿನಾಂಕಃ 25/07/2025 ರಂದು ಚಾಸಾ 9 ರವರಿಂದ M.A. Report ನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ದಾಖಲಾತಿಯನ್ನು ನಿಪಿ19 ಎಂದು ಸಾಕ್ಷಿಯ ಸಹಿಯನ್ನು ನಿಪಿ19ಎ ಎಂದು ಗುರುತಿಸಲಾಯಿತು.

ದಿನಾಂಕಃ 28/07/2025 ರಂದು ಚಾಸಾ 8 ರವರಿಂದ 1ನೇ ಆರೋಪಿತನ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ನಿಪಿ 20 ಎಂದು ಸಾಕ್ಷಿಯ ಸಹಿಯನ್ನು ನಿಪಿ20ಎ ಎಂದು ಗುರುತಿಸಲಾಯಿತು.

ತನಿಖೆಯಲ್ಲಿ ಆರೋಪಿತರ ಮೇಲೆ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಾಗುವುದರಿಂದ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು –ಆರೋಪಿ ಪರ ಶ್ರೀ. ಪಿ.ಎಸ್.ಎನ್. ವಕೀಲರಿಂದ**

ನಿಪಿ1 ನ್ನು ಚಾಸಾ 1 ರವರು ಚಾಸಾ 12 ರವರ ಸಹಾಯದಿಂದ ಬರೆದಿರುತ್ತಾರೆ. ನಿಪಿ2 ನ್ನು ತಯಾರಿಸುವ ಸಂದರ್ಭದಲ್ಲಿ ಅಪಘಾತಕ್ಕೆ ಒಳಗಾದ ವಾಹನದ ಚೂರುಗಳನ್ನು ಸಂಗ್ರಹಿಸಿರುವುದಿಲ್ಲ. ನಿಪಿ2 ನ್ನು ತಯಾರಿಸುವ ಸಂದರ್ಭದಲ್ಲಿ ಘಟನಾ ಸ್ಥಳದಲ್ಲಿ ವಾಹನ ಇರಲಿಲ್ಲ ಎಂದರೆ ಸಾಕ್ಷಿಯು ಸುರಕ್ಷತೆಯ ಆಧಾರದ ಮೇಲೆ ಅದನ್ನು ಠಾಣಾ ಆವರಣಕ್ಕೆ ತೆಗೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ದೋಷಾರೋಪಣಾ ಪಟ್ಟಿಯಲ್ಲಿ ವಾಹನವನ್ನು ಎಲ್ಲಿಂದ ಹಾಗೂ ಯಾವ ರೀತಿಯಾಗಿ ಪೊಲೀಸ ಠಾಣೆಗೆ ತಂದಿದ್ದೇವೆ ಎನ್ನುವ ಕುರಿತಾಗಿ ನಮೂದು ಇಲ್ಲ ಎಂದರೆ ಸಾಕ್ಷಿಯು ತನಿಖಾ ದಿನಚರಿಯಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲಾತಿಯಲ್ಲಿ ಎಲ್ಲಿಯೂ ಈ

ಕುರಿತಾಗಿ ನಮೂದು ಇಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಸದ್ರಿ ವಾಹನ ಇತ್ತು ಎನ್ನುವ ಕುರಿತಾಗಿ ಯಾವುದೇ ಭಾವಚಿತ್ರ ಇಲ್ಲ ಎಂದರೆ ಸರಿ. ಯಾವುದೇ ಸಹಿಯನ್ನು ದಸ್ತೂರ, ತನಿಖಾಧಿಕಾರಿ, ಫಿರ್ಯಾದಿ ಎಂದು ಬರೆದ ಮೇಲುಗಡೆ ಸಹಿಯನ್ನು ಪಡೆದುಕೊಳ್ಳುವ ರೂಢಿ ಇದೆ ಎಂದರೆ ಸರಿ.

ಚಾಸಾ 1 ರವರಿಗೆ ಇಂಗ್ಲೀಷನಲ್ಲಿ ಸಹಿ ಹಾಕುತ್ತಾರೆ ಎಂದರೆ ಸರಿ. ಹಾಗೂ ಅವರಿಗೆ ಬರವಣಿಗೆ ಹಾಗೂ ವಿದ್ಯಾಭ್ಯಾಸ ಇದೆ ಎಂದರೆ ಸಾಕ್ಷಿಯು ಈ ಕುರಿತಾಗಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

ಚಾಸಾ 1 ರವರು 1ನೇ ಆರೋಪಿತನು 2ನೇ ಆರೋಪಿತನ ವಾಹನವನ್ನು ಚಲಾಯಿಸಿಕೊಂಡು ಹೋಗಿ ಅಪಘಾತಪಡಿಸಿದ್ದಾನೆ ಎಂಬ ದೂರನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ಹೇಗೋ ಗಾಯಗೊಂಡು ಮೃತಪಟ್ಟ ಮಹಿಳೆಗೆ ವಿಮಾ ಪರಿಹಾರ ಸಿಗಲಿ ಎಂಬ ದೃಷ್ಟಿಯಿಂದ ನಮ್ಮ ಸಿಬ್ಬಂದಿಯಿಂದ ದೂರನ್ನು ತಯಾರಿಸಿ ಸುಳ್ಳು ಪ್ರವವ ಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ಪಡಿಸಿದೆ ಎನ್ನಲಾದ ವಾಹನವನ್ನು 1ನೇ ಆರೋಪಿತನು ಯಾವಾಗಲೂ ಚಲಾಯಿಸಲ್ಲಿ ಎಂದರೆ ಸರಿಯಲ್ಲ. 2ನೇ ಆರೋಪಿತನು ಸದ್ರಿ ವಾಹನವನ್ನು ಯಾರಿಗೂ ಚಲಾಯಿಸಲು ನೀಡಲಿಲ್ಲ ಎಂದರೆ ಸರಿಯಲ್ಲ, ಸದ್ರಿ ವಾಹನವನ್ನು ಚಾಲನೆ ಇಲ್ಲದೇ ನಿಲ್ಲಿಸಿಟ್ಟ ವಾಹನವನ್ನು ತಂದು ಈ ಪ್ರಕರಣವನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ, ಈ ಕಾರಣದಿಂದಾಗಿ ಸದ್ರಿ ವಾಹನವನ್ನು ನಮ್ಮ ಠಾಣೆಗೆ ಹೇಗೆ ತೆಗೆದುಕೊಂಡು ಬಂದಿದ್ದೇವೆ ಎಂಬ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ಒಂದಾನುವೇಳೆ ಸದ್ರಿ ವಾಹನದಿಂದ ಅಪಘಾತ ಆದರೆ ಅದರ

ತುಂಡುಗಳು ಬಿದ್ದಿದ್ದೆ ಆದರೆ ಅದನ್ನು ಜಪ್ತುಪಡಿಸಿಕೊಳ್ಳುತ್ತಿದ್ದೇವು ಎಂದರೆ ಸಾಕ್ಷಿಯು ಈ ಕುರಿತಾಗಿ ಪಂಚನಾಮೆಯಲ್ಲಿ ನಮೂದು ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ಚಾಸಾ 9 ರವರಿಂದ ಸುಳ್ಳು ವರದಿಯನ್ನು ಪಡೆದುಕೊಂಡು ಈ ಪ್ರಕರಣಕ್ಕೆ ಬೇಕಾದಂತೆ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ 9 ರವರು ವಾಹನವನ್ನು ತಪಾಸಣೆ ಮಾಡಿದ್ದಾರೆ ಎನ್ನುವ ಕುರಿತಾಗಿ ಯಾವುದೇ ಭಾವಚಿತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಚಾಸಾ 9 ರವರು ವರದಿಯನ್ನು ಮಾತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಎಲ್ಲಾ ಪಂಚನಾಮೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಭಾವಚಿತ್ರ ಹಾಗೂ ನಿಪಿ3 ನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿತನಿಗೆ ನಿಪಿ 16 ರಂತೆ ನೋಟೀಸನ್ನು ನೀಡಲಿಲ್ಲ ಎಂದರೆ ಸರಿಯಲ್ಲ ತನು ನಿಪಿ 17 ರಂತೆ ಉತ್ತರವನ್ನು ನೀಡಲಿಲ್ಲ ಎಂದರೆ ಸರಿಯಲ್ಲ, ಸದ್ರಿ ದಾಖಲಾಯನ್ನು ನಾನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ,

ಚಾಸಾ 1, 2 ಹಾಗೂ 3 ರವರಿಗೆ ಅರಿವಿಗೆ ಬರದಂತೆ ಖಾಲಿ ಕಾಗದದ ಮೇಲೆ ಸಹಿಯನ್ನು ಪಡೆದುಕೊಂಡು ಪಂಚನಾಮೆಯನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿತನಿಗೆ ಯಾವುದೇ ಗಾಯವಾಗದೇ ಇದ್ದರೂ ಸಹ ಸದ್ರಿ ದಾಖಲಾತಿಯನ್ನು ನಾನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಹೇಗೋ ಗಾಯಗೊಂಡು ಮೃತಪಟ್ಟ ವ್ಯಕ್ತಿಗೆ ಪರಿಹಾರ ದೊರಕಿಸಿಕೊಡಲು ತಯಾರಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಲನೆ ಇಲ್ಲದ ನಿಲ್ಲಿಸಿಟ್ಟ ವಾಹನವನ್ನು ತೆಗೆದುಕೊಂಡು

ಬಂದು ಸಂಪೂರ್ಣ ಸುಳ್ಳಿನಿಂದ ಕುಡಿದ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ